ನಾನು ಕೊಡಲೇ ತರಿಸಿಕೊಂಡು ಇದರ ಬಗ್ಗೆ ಸಮಂಜಸವಾದ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಜಿ. ನಾರಾಯಣ ಕುಮಾರ್.—ಸದಸ್ಯರ ಗೈರು ಹಾಜರಿ.

(v) ಶಾಹಬಾದಿನಲ್ಲಿ ನಡೆದ ಕೊಲೆ ಬಗ್ಗೆ.

ಶ್ರೀ ನಾರಾಯಣ ಕುಮಾರ್.—ಸದಸ್ಯರ ಗೈರು ಹಾಜರು

ಶ್ರೀ ಕೆ. ಬಿ. ಶಾನಪ್ಪ.—ಅಧ್ಯಕ್ಷರೇ ನಾನು ಬಹಳ ವಿಷಾದದಿಂದ ಈಗ ಒಂದು ಮಾತನ್ನು ಇಲ್ಲಿ ಹೇಳುತ್ತಿದ್ದೇನೆ. ನನ್ನ ಕ್ಷೇತ್ರದಲ್ಲಿ ಮತ್ತು ತಾಲ್ಲೂಕಿನಲ್ಲಿ ಈಗ ಮರ್ಡರ್ ನಡೆದಿದೆ. ಮೊನ್ನೆ 18ನೆ ತಾರೀಖು ಇನ್ನೊಂದು ಮರ್ಡರ್ ಆಯಿತು. ಜನರಲ್ಲಿ ಒಂದು ಭಯದ ವಾತಾವರಣ ಇದೆಯೋ ಇಲ್ಲವೋ ಎಂದು ಕಾಣುತ್ತಿಲ್ಲ ಬಾಬಾ ಮೊಹಬೂಬ್‌ಲಾಲ್ ಮಹಮ್ಮದ್ ಎಂಬ 25 ವರ್ಷ ವಯಸ್ಸಿನವರು ದಾರಿಯಲ್ಲಿ ಹೆಣ್ಣು ಮಗಳನ್ನು ರಕ್ಷಿಸಲಿಕ್ಕೆ ಹೋದಾಗ ಇಬ್ಬರು ಕೂಡಿ ಇವನಿಗೆ ಚೆನ್ನಾಗಿ ಹೊಡೆದಿದ್ದಾರೆ ಒಬ್ಬ ಮಾತ್ರ ಸಿಕ್ಕಿದ್ದಾನೆ. ಇನ್ನೊಬ್ಬ ಪರಾರಿಯಾಗಿದ್ದಾನೆ. ಈ ಪರಿಸ್ಥಿತಿಯಲ್ಲಿ ಆಲ್ಲಿ ಏನಾಗಿದೆಯೆಂದರೆ ಚಿತ್ತಾಪುರದಲ್ಲಿ ವಿಚಿತ್ರ ವಾದಂಥ ವಾತಾವರಣ ಉಂಟಾಗುತ್ತಿದೆ ಸಮಾಜದಲ್ಲಿರತಕ್ಕಂಥ ಅಂಟಿ ಸೋಷಿಯಲ್ ಎಲಿಮೆಂಟ್‌ಗಳು ಇದಕ್ಕೆ ಬೇರೆ ಕಲರ್ ಕೊಡಲಿಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಆದುದರಿಂದ ದಯಮಾಡಿ ಈ ಬಗ್ಗೆ ಸರ್ಕಾರ ಯಾರು ಅಪರಾಧಿ ಇದ್ದಾರೆ ಅವರನ್ನು ಕಂಡು ಹಿಡಿದು ಅವರು ದೊಡ್ಡ ಶ್ರೀಮಂತರೇ ಆಗಿದ್ದರೂ ಸಹ ಅವರನ್ನು ಒಳಗಡೆ ಹಾಕಿ ಜನರಿಗೆ ನ್ಯಾಯವನ್ನು ದೊರಕಿಸಿಕೊಡಬೇಕು. ಈಗ ಅಲ್ಲಿ ಜನರಿಗೆ ಪೊಲೀಸರ ಭಯ ಇದೆ. ಅದರ ಬಗ್ಗೆ ಸರ್ಕಾರ ಗಮನಹರಿಸಬೇಕು.

ಶ್ರೀ ಎ ಲಕ್ಷ್ಮೀಸಾಗರ್.—ಕಾನೂನು ಪ್ರಕಾರ ತಪ್ಪಿತಸ್ಥರ ಮೇಲೆ ಬಿಗಿಯಾದಂಥ ಕ್ರಮ ತೆಗೆದುಕೊಂಡು ಶಿಕ್ಷೆ ಮಾಡಲಿಕ್ಕೆ ಸರ್ಕಾರ ಎಲ್ಲಾ ರೀತಿಯ ಕ್ರಮವನ್ನು ತೆಗೆದುಕೊಳ್ಳುತ್ತದೆ.

10. A. M.

(vi) ದಾವಣಗೆರೆಯಲ್ಲಿ ವರದಕ್ಷಿಣೆ ಕೊಡದ ಕಾರಣ ಗೋವಿಂದಪ್ಪ ಎಂಬುವನು ತನ್ನ ಹೆಂಡತಿಯನ್ನು ಕೊಲೆ ಮಾಡಿದ ಬಗ್ಗೆ.

ಸ್ವಾಮಿ, ಬಹಳ ಮುಖ್ಯವಾಗಿ ರಾಜ್ಯದ ಗಮನವನ್ನು ಸೆಳೆಯುವ ಪ್ರಶ್ನೆ. ದಾವಣಗೆರೆಯಲ್ಲಿ 26-1-84 ರಂದು ಸಂಜೆ ಸುಮಾರು 5-30ರ ವೇಳೆಯಲ್ಲಿ ಶ್ರೀಗೋವಿಂದಪ್ಪ ಎನ್ನುವ ಒಬ್ಬ ಸೇಲ್ ಟ್ಯಾಕ್ಸ್ ಇನ್‌ಸ್ಪೆಕ್ಟರ್ ಒಬ್ಬನು ತನ್ನ ಮುದುವೆ ಸಮಯದಲ್ಲಿ ಹಣವನ್ನು ತನ್ನ ಮಾವನು ಕೊಡಬೇಕಾಗಿದ್ದ ಗಿದ್ದ ವರದಕ್ಷಿಣೆಯನ್ನು ಸ್ವಲ್ಪ ಕಡಿಮೆ ಕೊಟ್ಟಿದ್ದರಿಂದ ಇನ್ನು ಬಾಕಿ ಉಳಿದಿದ್ದ ಹಣವನ್ನು ತಂದು ಕೊಂಡು ವಂತೆ ತನ್ನ ಹೆಂಡತಿಗೆ ಆಗಿಂದಾಗ್ಗೆ ತೊಂದರೆ ಕೊಡುತ್ತಿದ್ದನು. ಆಕೆಯು ಇವನು ಕೊಡತಕ್ಕ ತೊಂದರೆಯನ್ನೆಲ್ಲಾ ಸಹಿಸಿಕೊಂಡು ತನ್ನ ಅಣ್ಣಂದಿರಿಗೆ ಪತ್ರಗಳನ್ನು ಬರೆದು ನನ್ನ ಗಂಡನು ವರದಕ್ಷಿಣೆಯ ಬಾಕಿ ಹಣವನ್ನು ಇನ್ನು ತಂದು ಕೊಡಲಿಲ್ಲವೆಂದು ಮುದ್ದೆ ಕೋಲಿನಿಂದ ನನಗೆ ಬಹಳ ಮತ್ತು ಮಕ್ಕಳಿಗೆ ಹೊಡೆಯುತ್ತಿದ್ದಾನೆ. ದಯವಿಟ್ಟು ಇನ್ನುಳಿದ ವರದಕ್ಷಿಣೆ ಹಣವನ್ನು ತಂದು ಕೊಡಬೇಕೆಂದು ಕಾಗದ ಬರೆದಿದ್ದಾಳೆ. ಆದರೆ ಆವರು ಹಣವನ್ನು ತಂದುಕೊಡುವುದು ತಡವಾಯಿತೆಂದು ಸಾಯಂಕಾಲ 5-30ರ ಸಮಯದಲ್ಲಿ ಸೀಮೆಎಣ್ಣೆ ಸುರಿದುಕೊಂಡು ಬೆಂಕಿ ಹಚ್ಚಿ ಕೊಂಡಳು. ಅಕ್ಕ ಪಕ್ಕದ ಮನೆಯ ಜನರೆಲ್ಲಾ ಆಕೆಯನ್ನು ಆಟೋದಲ್ಲಿ ಹಾಕಿಕೊಂಡು ಆಸ್ಪತ್ರೆಗೆ ಕರೆದುಕೊಂಡು ಹೋದರು ಆಕೆ ಗರ್ಭಿಣಿ, ಅವಳಿಗೆ ಎರಡು ಮಕ್ಕಳಿದ್ದಾರೆ. ಮದುವೆ ಆಗಿರುವಾಗ ತೆಗೆಸಿರುವ ಫೋಟೋ ಮಕ್ಕಳ ಫೋಟೋ ಮತ್ತು ಶವವನ್ನು ಪರೀಕ್ಷೆ ಮಾಡುವಾಗ ತೆಗೆದಿರುವ ಫೋಟೋಗಳಿವೆ. ಇದೆಲ್ಲಾ ಪತ್ರಿಕೆಯಲ್ಲಿ ಬಂದಿದೆ. ಈ ರೀತಿಯಾದ ಹೀನ ಕೃತ್ಯವನ್ನು ಎಸಗಿರುವವರಿಗೆ ಸರಿಯಾಥ ಶಿಕ್ಷೆ ಆಗಲೇಬೇಕು. ಅವನಿಗೆ ಮಾತ್ರ ಅಲ್ಲ ಅವನ ಜೊತೆಯಲ್ಲಿ ಅವನ ಮನೆಯವರೂ ಸಾಮೀಲ್ದಾಗಿದ್ದಾರೆ. ಇನ್ನು ಅನೇಕ ಜನ ಅದಕ್ಕೆ ಪ್ರೋತ್ಸಾಹಿಸಿದ್ದಾರೆ. ಇದರ ಜೊತೆಯಲ್ಲಿ ಬರೀ ಹಣ ಮಾತ್ರವಲ್ಲ. ಆ ಹೆಣ್ಣು ಮಗಳ ಹೇಳಿಕೆ ಪ್ರಕಾರ ಬೇರೆ ಒಂದು ಹೆಣ್ಣನ್ನು ಮನೆಗೆ ಕರೆದುಕೊಂಡು ಬಂದು ಅವಳ ಉಪಚಾರವನ್ನು ಈಕೆಯ ಕೈಯ್ಯಲ್ಲಿ ಮಾಡಿಸುತ್ತಿದ್ದನಂತೆ. ಈ ರೀತಿ ತೊಂದರೆಯನ್ನು ಕೊಟ್ಟಾಗ ಅದನ್ನು ಸಹಿಸದೇ ಕೊನೆಗೆ ಸೀಮೆಎಣ್ಣೆ ಸುರಿದು ಬೆಂಕಿ ಹಚ್ಚಿ ಕೊಂಡು ಮೃತಳಾದಳು. ಇಂಥಾ ಅನ್ಯಾಯವನ್ನು ತಡೆಗಟ್ಟಬೇಕು. ವರದಕ್ಷಿಣೆಗಾಗಿ ಇನ್ನು ಹೆಣ್ಣು ಮಕ್ಕಳ